

## ಕವಿತೆ




**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ಜಬೀವುಲ್ಲಾ ಎಂ. ಅಸದ್


# ಹಕ್ಕಿಯೊಡನೆ ಒಂದು ಹಾಡು

ಹಕ್ಕಿಯೊಡನೆ ಒಂದು ಹಾಡು
ಹಾರುತಿರುವುದು
ಬಾನನೀಲಿಯಲ್ಲಿ ಈಗ
ಸೇರುತಿರುವುದು

ದಿನದಿನವೂ ಬೇರೆ ಹಾಡು
ಹಾಡುತಿರುವುದು
ಹಾಡು ಕೇಳಿ ಉಷೆಗೆ ಹಿಗ್ಗು
ಮೂಡುತಿರುವುದು

ಹರುಷವುಕ್ಕಿ ಹೊಮ್ಮಿಬಂದ
ನಗೆಯ ಅಲೆಗಳು
ಕಲಕಂಠಕೆ ತಲೆದೂಗಿವೆ
ಗಿಡದ ಎಲೆಗಳು

ಇಂಚರದಲಿ ಬಾಳಗೋಳು
ಮುಳುಗಿಹೋಯಿತು
ಹಾಡುತಿದ್ದ ಹಕ್ಕಿ ಈಗ
ಕಾಣದಾಯಿತು

ಹಾಡ ಹುಡುಕಿ ಹೊರಟಿರುವರು
ನಾಡಿನೆಲ್ಲೆಡೆ!
ಹಾಡುಹಕ್ಕಿ ಕಾಣದಂತೆ
ಕಾಡಿನಲ್ಲಿದೆ!

ನಿಮ್ಮ ನಿಮ್ಮ ಹಕ್ಕಿ ನೀವು
ಹಿಡಿದುಕೊಳ್ಳಿರಿ
ನಿಮ್ಮ ಹಾಡುಗಳನು ಈಗ
ಹಾಡಿಕೊಳ್ಳಿರಿ